DECEMBER 18, 2025

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಬೆಳಗಾವಿ ಮತ್ತು ಚಿಕ್ಕೋಡಿ, ಶೈಕ್ಷಣಿಕ ಜಿಲ್ಲೆಗಳಲ್ಲಿ ನಡೆಸಲಾಗುತ್ತಿರುವ, ಪ್ರತಿಭಾನ್ವೇಷಣೆ ಪರೀಕ್ಷೆ, ರಾಜ್ಯದಲ್ಲಿ ಮಾದರಿಯಾಗಿದ್ದು, ರಾಜ್ಯ ಮಟ್ಟದಲ್ಲಿ, ವಿವಿಧ ಹಂತಗಳಲ್ಲಿ, ಟ್ಯಾಲೆಂಟ್ ಸರ್ಚ್ ಎಕ್ಸಾಂ ಏರ್ಪಡಿಸಲು, ಯೋಜನೆ ರೂಪಿಸಲಾಗುವುದು ಎಂದು, ಶಾಲಾ ಶಿಕ್ಷಣ ಖಾತೆ ಸಚಿವ, ಮಧು ಬಂಗಾರಪ್ಪ ತಿಳಿಸಿದ್ದಾರೆ. ಸುವರ್ಣ ವಿಧಾನಸೌಧದ, ಕೇಂದ್ರ ಸಭಾಂಗಣದಲ್ಲಿ ನಡೆದ, ಪ್ರತಿಭಾನ್ವೇಷಣೆ ಪರೀಕ್ಷೆ–2025ರ ಕಾರ್ಯಕ್ರಮದಲ್ಲಿ, ಅವರು ಮಾತನಾಡಿದರು.

<><><>

ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗೆ ಪ್ರತಿ ವರ್ಷ ಪ್ರತಿಭಾನ್ವೇಷಣೆ ಪರೀಕ್ಷೆ ಆಯೋಜಿಸುತ್ತಿರುವುದು ಉತ್ತಮ ನಡೆ ಎಂದರು.

<><><>

ಜಿಲ್ಲಾ ಪಂಚಾಯಿತಿ ಸಿ.ಇ.ಓ. ರಾಹುಲ್ ಶಿಂಧೆ ಮಾತನಾಡಿ, ಸಿ.ಇ.ಟಿ., ಕೆ.ಪಿ.ಎಸ್.ಸಿ, ಯು.ಪಿ.ಎಸ್.ಸಿ. ಸೇರಿದಂತೆ, ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು, ಈ ಪರೀಕ್ಷೆಗಳು ಸಹಕಾರಿ ಎಂದರು.

<><><>

ಶಿಕ್ಷಣ ಇಲಾಖೆ ಉಪ ನಿರ್ದೇಶಕಿ, ಲೀಲಾವತಿ ಹಿರೇಮಠ ಮಾತನಾಡಿ, ಪ್ರತಿಭಾನ್ವೇಷಣೆ ಪರೀಕ್ಷೆ ಬರೆದ, 52 ಸಾವಿರ ವಿದ್ಯಾರ್ಥಿಗಳಲ್ಲಿ, 122 ವಿದ್ಯಾರ್ಥಿಗಳು ಹೆಚ್ಚು ಅಂಕ ಪಡೆದುಕೊಂಡಿದ್ದಾರೆ, ಎಂದರು.

<><><>

ರಾಜ್ಯ ಸರ್ಕಾರ, ಒಟ್ಟು 2 ಲಕ್ಷದ 84 ಸಾವಿರ ಹುದ್ದೆಗಳನ್ನು ಪ್ರಸ್ತುತ ಖಾಲಿ ಇರಿಸಿದೆ; ನಿಗಮ ಮಂಡಳಿಗಳಲ್ಲಿ, 1 ಲಕ್ಷ ಹುದ್ದೆಗಳು, ವಿಶ್ವವಿದ್ಯಾಲಯಗಳಲ್ಲಿ 14 ಸಾವಿರದ 677 ಹುದ್ದೆಗಳು ಸೇರಿ, ಒಟ್ಟು 4 ಲಕ್ಷ ಹುದ್ದೆಗಳು ಖಾಲಿಯಿವೆ. ಈ ಹುದ್ದೆಗಳ ಭರ್ತಿಗೆ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು, ಕೇಂದ್ರದ ಸಣ್ಣ, ಸೂಕ್ಷ್ಮ ಮತ್ತು ಮಧ್ಯಮ ಕೈಗಾರಿಕೆಗಳ, ರಾಜ್ಯ ಖಾತೆ ಸಚಿವರಾದ, ಶೋಭಾ ಕರಂದ್ಲಾಜೆ, ಎಕ್ಸ್ ಮಾಧ್ಯಮದಲ್ಲಿ, ಆಗ್ರಹಿಸಿದ್ದಾರೆ.

<><><>

ಪೋಲಿಯೋ ರೋಗ ನಿರ್ಮೂಲನೆಗಾಗಿ, ಇದೇ 21 ರಿಂದ 24ನೇ ತಾರೀಖಿನ ವರೆಗೆ, ವಿಜಯಪುರ ಜಿಲ್ಲೆಯಲ್ಲಿ, 5 ವರ್ಷದ ಒಳಗಿನ ಎಲ್ಲ ಮಕ್ಕಳಿಗೆ, ಪೋಲಿಯೋ ಹನಿ ನೀಡಲಾಗುತ್ತಿದೆ. ಐದು ವರ್ಷದ ಒಳಗಿನ, 2 ಲಕ್ಷ 96 ಸಾವಿರದ, 119 ಮಕ್ಕಳಿಗೆ ಪೋಲಿಯೋ

ಲಸಿಕೆ ನೀಡಲು, ಸಾವಿರದ 3 ನೂರಾ 31 ಪಲ್ಸ್ ಪೋಲಿಯೋ ಬೂತ್‌ಗಳನ್ನು ಸ್ಥಾಪಿಸಲಾಗಿದೆ ಎಂದು, ಜಿಲ್ಲಾ ಆರೋಗ್ಯಾಧಿಕಾರಿ, ಡಾಕ್ಟರ್ ಸಂಪತ್ ಗುಣಾರಿ ತಿಳಿಸಿದ್ದಾರೆ.

<><><>

ರಾಜ್ಯದ ಒಟ್ಟು ಬಜೆಟ್‌ನ, ಬಹುಪಾಲು ಅನುದಾನಗಳನ್ನು, ಜಲ ಸಂಪನ್ಮೂಲ ಇಲಾಖೆಗೆ ನೀಡಲಾಗಿದೆ; ಜನಪರ ಕಾಮಗಾರಿಗಳನ್ನು ಕೈಗೊಂಡು, ಅನುದಾನದ ಸಮರ್ಪಕ ಬಳಕೆ ಮಾಡುವಂತೆ, ಜಲ ಸಂಪನ್ಮೂಲ ಇಲಾಖೆ, ಅಪರ ಮುಖ್ಯ ಕಾರ್ಯದರ್ಶಿ ಗೌರವ ಗುಪ್ತಾ ಸೂಚಿಸಿದ್ದಾರೆ.  ಧಾರವಾಡದ, ಜಲ ಮತ್ತು ನೆಲ ನಿರ್ವಹಣಾ ಸಂಸ್ಥೆ, ವಾಲ್ಮಿ ವತಿಯಿಂದ, ಕೃಷಿ ವಿಶ್ವವಿದ್ಯಾಲಯದ, ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ, ಜಲ ಸಂಪನ್ಮೂಲ ಇಲಾಖೆಯ, ಅಭಿಯಂತರ ಸಮ್ಮೇಳನ, ಜಲ ಸಂಕಲ್ಪ–2025 ಉದ್ಘಾಟಿಸಿ, ಮಾತನಾಡಿದರು.

<><><>

ರಾಜ್ಯದ ರೈತರನ್ನು ನೈಸರ್ಗಿಕ ಕೃಷಿಯತ್ತ ಸೆಳೆಯಲು, ಹಾಸನ ಜಿಲ್ಲೆ, ಹಳೇಬೀಡಿನ ಪುಷ್ಪಗಿರಿಯಲ್ಲಿ, 2026ರ ಜನವರಿ 3 ರಿಂದ, 6ನೇ ತಾರೀಖಿನ ವರೆಗೆ, ಸುಭಾಷ ಪಾಳೇಕರ ನೈಸರ್ಗಿಕ ಕೃಷಿ ಕಾರ್ಯಾಗಾರ ಆಯೋಜಿತವಾಗಿದೆ.  ರಾಜ್ಯ ರೈತ ಸಂಘದ, ಸಾಮೂಹಿಕ ಅಧ್ಯಕ್ಷರಾದ, ಚುಕ್ಕಿ ನಂಜುಂಡಸ್ವಾಮಿ ಮಾಹಿತಿ ನೀಡಿ, ಈ ಕಾರ್ಯಾಗಾರದಲ್ಲಿ, 8 ದೇಶಗಳಿಂದ ಹಾಗೂ ವಿವಿಧ ರಾಜ್ಯಗಳ 350 ರೈತರು ಹೆಸರು ನೋಂದಾಯಿಸಿದ್ದಾರೆ ಎಂದು, ತಿಳಿಸಿದ್ದಾರೆ.

<><><>

ಭಾರತೀಯ ರೇಲ್ವೆ ಮಂಡಳಿ, ರಿಸರ್ವೇಶನ್ ಚಾರ್ಟ್ ಸಮಯವನ್ನು, ಪರಿಷ್ಕರಿಸಿದೆ. ಪ್ರಯಾಣಿಕರು ಇನ್ನು ಮುಂದೆ, ರೈಲು ಹೊರಡುವ, 10 ಗಂಟೆಗಳಷ್ಟು ಮುಂಚಿತವಾಗಿ, ತಮ್ಮ ಮುಂಗಡ ಟಿಕೆಟ್‌ನ ಸ್ಥಿತಿಗತಿ, ತಿಳಿಯಬಹುದು. ಪ್ರಸ್ತುತ, ರಿಸರ್ವೇಶನ್ ಚಾರ್ಟ್‌ಗಳನ್ನು, ರೈಲು ಹೊರಡುವ ನಾಲ್ಕು ಗಂಟೆ ಮೊದಲು, ಪ್ರಕಟಿಸಲಾಗುತ್ತದೆ.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಮಠದ ಆವರಣದಲ್ಲಿ, ನಾಳೆ ಸಂಜೆ 6.15ಕ್ಕೆ, ಆರೂಢ ಆರತಿ ಕಾರ್ಯಕ್ರಮಕ್ಕೆ, ಚಾಲನೆ ನೀಡಲಾಗುವುದು ಎಂದು, ಶ್ರೀ ಸಿದ್ಧಾರೂಢ ಸ್ವಾಮೀಜಿ ಮಠ ಟ್ರಸ್ಟ್ ಕಮಿಟಿ ಅಧ್ಯಕ್ಷ ಚನ್ನವೀರ ಮುಂಗರವಾಡಿ, ತಿಳಿಸಿದ್ದಾರೆ. ಶ್ರೀ ಮಠದ ಮುಖ್ಯ ಆಡಳಿತಾಧಿಕಾರಿ, ಧಾರವಾಡ ಜಿಲ್ಲೆ, ಪ್ರಧಾನ ನ್ಯಾಯಾಧೀಶರಾದ ಬಿ.ಎಸ್. ಭಾರತಿ, ಉದ್ಘಾಟಿಸಲಿದ್ದಾರೆ, ಎಂದರು.

<><><>

ವಿಕಸಿತ ಭಾರತ; ಗ್ರಾಮೀಣ ರೋಜ್‌ಗಾರ್ ಮತ್ತು ಆಜೀವಿಕಾ ಮಿ  ´ನ್, ವಿಕಸಿತ ಭಾರತ – ಜಿ ರಾಮ ಜಿ ಮಸೂದೆ, 2025, ಪ್ರಸ್ತುತ, ಗ್ರಾಮೀಣ ಉದ್ಯೋಗ ಖಾತ್ರಿ ಆಡಳಿತ ವ್ಯವಸ್ಥೆಗಳನ್ನು, ಆಧುನೀಕರಿಸಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, 2047ರ ವಿಕಸಿತ ಭಾರತ ಪರಿಕಲ್ಪನೆಯೊಂದಿಗೆ, ವಿಕಸಿತ ಭಾರತ – ಜಿ ರಾಮ ಜಿ ಮಸೂದೆ, ಮರು ರೂಪಿಸಲಾಗಿದೆ. ಗ್ರಾಮೀಣ ಕೂಲಿ ಕಾರ್ಮಿಕರ ಹಾಜರಾತಿಯ, ಬಯೋಮೆಟ್ರಿಕ್ ದೃಢೀಕರಣ, ಮೊಬೈಲ್ ಆಧಾರಿತ ಮೇಲ್ವಿಚಾರಣೆ. ನೈಜ–ಸಮಯದ ಡ್ಯಾಶ್‌ಬೋರ್ಡ್‌ಗಳು,  ಕೃತಕ ಬುದ್ಧಿಮತ್ತೆ ಸಂಚಾಲಿತ, ಸಕ್ರಿಯ ವಿಶ್ಲೇ  ´ಣೆ, ನಾಗರಿಕ ಭಾಗವಹಿಸುವಿಕೆ ಖಾತ್ರಿ ಪಡಿಸುವ ವೇದಿಕೆ, ಬಲವರ್ಧಿತ ಸಾಮಾಜಿಕ ಲೆಕ್ಕ ಪರಿಶೋಧನಾ ಕಾರ್ಯ ವಿಧಾನದೊಂದಿಗೆ, ನೂತನ ಮಸೂದೆ – ವಿಕಸಿತ ಭಾರತ – 'ಜಿ ರಾಮ ಜಿ'ಯನ್ನು, ಕೇಂದ್ರ ಸರ್ಕಾರ, ಸಂಸತ್ ಅನುಮೋದನೆ ಬಳಿಕ, ಕಾಯ್ದೆಯಾಗಿ, ಅನುಷ್ಠಾನಗೊಳಿಸಲಿದೆ. ಇಂದು ಲೋಕಸಭೆಯಲ್ಲಿ ಚರ್ಚೆ ಮುಂದುವರೆಯಲಿದೆ.

<><><>

ನಿಧನ ವಾರ್ತೆ

<><><>

ಅಮೆರಿಕೆಯ, ಕೋಲಂಬಸ್ ಓಹಿಯೋ ಸ್ಟೇಟ್ ಯುನಿವರ್ಸಿಟಿ, ವಿಶ್ರಾಂತ ಪ್ರಾಧ್ಯಾಪಕ, ಖ್ಯಾತ ಶಿಕ್ಷಣ ತಜ್ಞ, ಪ್ರೊಫೆಸರ್ ಆರ್.ಜಿ. ಅಕ್ಕಿಹಾಲ, ನಿನ್ನೆ ಧಾರವಾಡದಲ್ಲಿ ನಿಧನರಾದರು. ಅವರಿಗೆ 87 ವರ್ಷ ವಯಸ್ಸಾಗಿತ್ತು.  ಡಾಕ್ಟರ್ ರಾಮಚಂದ್ರ ಗಟಿಗೆಪ್ಪ ಅಕ್ಕಿಹಾಲ, ವ್ಯವಹಾರ ಅಧ್ಯಯನ ಕ್ಷೇತ್ರದ ಹೆಸರಾಂತ ಪ್ರಾಧ್ಯಾಪಕರಾಗಿ, ಸ್ವದೇಶಕ್ಕೆ ಮರಳಿದ ಬಳಿಕ, ಗ್ರಾಮೀಣ ಭಾಗದ, ಅರ್ಹ, ಪ್ರತಿಭಾವಂತ, ಬಡ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ, ಅಕ್ಕಿಹಾಲ ಮಹಾವಿದ್ಯಾಲಯ ಸ್ಥಾಪಿಸಿ, ಮಾದರಿಯಾಗಿದ್ದರು.  ಇಂದು ಮಧ್ಯಾಹ್ನ 2 ಗಂಟೆಗೆ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯ ಆವರಣದ ರುದ್ರಭೂಮಿಯಲ್ಲಿ, ಪಾರ್ಥಿವ ಶರೀರದ ಅಂತ್ಯಕ್ರಿಯೆ ಜರುಗಲಿದೆ. ಕರ್ನಾಟಕ ವಿದ್ಯಾವರ್ಧಕ ಸಂಘದ ಪದಾಧಿಕಾರಿಗಳು ಸೇರಿದಂತೆ, ಅನೇಕ ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.